# ಬೃಹಚ್ಚರಣ

ಸಂಪಾದಕ ಸಮಿತಿ

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಬಿ.ಎಸ್. ಸೂರ್ಯನಾರಾಯಣ | ಸದಸ್ಯರು |
| ಕೆ.ಸಿ. ನಟರಾಜನ್ | ಸದಸ್ಯರು |
| ಎನ್. ಚಂದ್ರಮೌಳಿ | ಸದಸ್ಯರು |
| ಅಚಲ ರಮೇಶ್ | ಸದಸ್ಯರು |
| ಕೆ.ಎಸ್. ಮಧುಸೂದನ | ಸಂಪಾದಕ |


ಸಂಪುಟ : 2 ಸಂಚಿಕೆ : 1 ತ್ರೈಮಾಸಿಕ ವಾರ್ತಾಪತ್ರ ಖಾಸಗಿ ಪ್ರಸಾರಕ್ಕಾಗಿ ಜನವರಿ-ಮಾರ್ಚ್ 2012

## ಶೃಂಗೇರಿ ಶ್ರೀಶ್ರೀಶ್ರೀಗಳ ಆಶೀರ್ವಾದ

श्री श्री जगद्गुरु शङ्कराचार्य महासंस्थानम्,
दक्षिणाम्नाय श्री शारदापीठम्, शृङ्गेरी
Sri Sri Jagadguru Shankaracharya Mahasamstanam
Dakshinamnaya Sri Sharada Peetham, Sringeri - 577 139.

Ref : S-33/ 7e62 Camp : SRINGERI Date 17-1-2012

ಗೆ,

ಶ್ರೀ ಎಸ್. ಸೋಮಸುಂದರ
ಅಧ್ಯಕ್ಷರು,
ಮೈಸೂರು ಮಂಜುಚತ್ತೂರು ದ್ರಾವಿಡ ಬೃಹಚ್ಚರಣ ಸಂಘ (ನೋಂ)
ನಂ.8, 3ನೇ ಕ್ರಾಸ್, ಅಣ್ಣಯ್ಯಪ್ಪ ಬ್ಲಾಕ್
ಕುಮಾರ ಪಾರ್ಕ್ ವೆಸ್ಟ್, ಬೆಂಗಳೂರು – 560 020

ಮಾನ್ಯರೇ,

ನೀವು ದಿನಾಂಕ 14/1/2012ರಂದು ಬರೆದ ಪತ್ರ ಹಾಗೂ ಅದರೊಂದಿಗೆ ಕಳುಹಿಸಿದ ಬೃಹಚ್ಚರಣ ತ್ರೈಮಾಸಿಕ ವಾರ್ತಾ ಪತ್ರಿಕೆಯ ಎರಡು ಸಂಚಿಕೆಗಳು ತಲುಪಿ, ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಪಾದಾರವಿಂದಗಳಲ್ಲಿ ಸಾಷ್ಟಾಂಗ ಪ್ರಣಾಮ ಪೂರ್ವಕ ಸಮರ್ಪಿಸಲಾಯಿತು.

ಶ್ರೀ ಶಾರದಾ ಚಂದ್ರಮೌಳೀಶ್ವರರ ಕೃಪೆಯಿಂದ ನೀವು ಪ್ರಕಟಿಸುತ್ತಿರುವ 'ಬೃಹಚ್ಚರಣ' ತ್ರೈಮಾಸಿಕ ವಾರ್ತಾ ಪತ್ರಿಕೆಯು ವಿದ್ವತ್ಪೂರ್ಣ ಲೇಖನಗಳಿಂದೊಡಗೂಡಿ ಜನಪ್ರಿಯತೆಗಳಿಸುವಂತಾಗಲಿ ಎಂದು ಶ್ರೀ ಶ್ರೀಗಳವರು ಆಶೀರ್ವದಿಸಿ, ಅನುಗ್ರಹಿಸಿರುವ ಆಶೀರ್ಮಂತ್ರಾಕ್ಷತೆ ಮತ್ತು ಶ್ರೀ ಶಾರದಾ ಅರ್ಚನಾ ಪ್ರಸಾದವನ್ನು ಇದರೊಂದಿಗೆ ಕಳುಹಿಸಿರುತ್ತೇವೆ.

ಇಂತು,
(ವಿ.ಆರ್.ಗೌರೀಶಂಕರ್).

ಆಡಕ: ಕುಂಕುಮ ಪ್ರಸಾದ, ಆಶೀರ್ಮಂತ್ರಾಕ್ಷತೆ.

Phone : 08265-250123 / 250192 Fax : 08265-250792
E-mail : info@sringerisharadapeetham.org Visit us : www.sringerisharadapeetham.org

## ಸಂಪಾದಕೀಯ

ಇಂದ್'ಸಲು ಪತ್ರಿಕೆ ವರುದ್ದು ಕೊಂಚು ನಿದಾನು ಆಯದೆ. ಎಲ್ಲಾರ್‍ಕೂ ಉಗಾದಿ ಶುಬಾಶಯುಂಗು. ಓದೂ ಜಾಸ್ತಿ ಚೊಲ್ಲುತುಕು ಸಮಾಚಾರು ಇಲ್ಲೆ. ಇನ್'ಕೊಂಚು ಲೇಕನುಂಗು ಅದೆ. ಅತ್ತೆ ಮುನ್ನಿ ಸಂಚಿಕೇಲೆ ಪೋಡ್ರಾಂದೆ.

ನಮಸ್ಕಾರುಂಗು. ■ ಕೆ.ಎಸ್. ಮಧುಸೂದನ

## ಅಧ್ಯಕ್ಷರ ನುಡಿ

ನನ್ನ ಬಂಧುಗಳಿಗೆ ನಮಸ್ಕಾರ

ಹೊಸವರ್ಷ 2012, ಮಕರ ಸಂಕ್ರಾಂತಿಯೊಂದಿಗೆ ಮುಂಬರುವ ಶಿವರಾತ್ರಿ, ಚಂದ್ರಮಾನ ಯುಗಾದಿ ಹಬ್ಬಗಳು ಶುಭತರಲಿ ನಿಮಗೆಲ್ಲಾ.



## ಅರ್ಪಣೆ

ಬೃಹಚ್ಚರಣ

ಈ ಸಂಚಿಕೆಯನ್ನು ಪ್ರಸಿದ್ಧ ಸಾಹಿತಿ ಡಿ.ವಿ. ಗುಂಡಪ್ಪ ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಿದೆ.

"ಬೃಹಚ್ಚರಣ" ಎರಡನೇ ಸಂಚಿಕೆಯು ಎಲ್ಲರ ಮೆಚ್ಚುಗೆ ಗಳಿಸಿದೆ. ಪೂಜ್ಯ ಶೃಂಗೇರಿ ಶಂಕರಾಚಾರ್ಯ ಶ್ರೀಶ್ರೀಶ್ರೀಗಳು "ಬೃಹಚ್ಚರಣ" ಜನಪ್ರಿಯತೆಗಳಿಸಲಿ ಎಂದು ಆಶೀರ್ವದಿಸಿದ್ದಾರೆ.

ವರ್ಷ 2010ರಂತೆಯೇ ಈ ಬಾರಿ, ದಿನಾಂಕ 31-12-2011ರಂದು ನಡೆದ "ಸಾಂಸ್ಕೃತಿಕ ಸಂಜೆ" ಸಮಾರಂಭದಲ್ಲಿ ಮುನ್ನೂರಕ್ಕೂ ಹೆಚ್ಚು ಸಂಘದ ಕುಟುಂಬದ ಸದಸ್ಯರು ಭಾಗವಹಿಸಿದ್ದು ವೇದಿಕೆಯ ಮೇಲೆ ಅರವತ್ತಕ್ಕೂ ಹೆಚ್ಚು ಮಂದಿ, ಅಬಾಲವೃದ್ಧರು ತಮ್ಮಲ್ಲಿರುವ ಪ್ರತಿಭೆ ಪ್ರದರ್ಶಿಸಿದ್ದು ಸಭಿಕರಿಗೂ ಕಾರ್ಯಕರ್ತರಿಗೂ ಸಂತಸ ಕೊಟ್ಟಿತು.

ನಮ್ಮ ಸದಸ್ಯ ಶ್ರೀ ಮಣಿ ಗುಂಜೂರರವರು ಆಸ್ಟ್ರೇಲಿಯಾ ದೇಶದಿಂದ ಬಂದು ಮೃದಂಗ ನುಡಿಸಿದ್ದು, ಎಂಬತ್ತು ವಸಂತಗಳನ್ನು ಕಂಡ ಶ್ರೀಮತಿ ಗೌರಮ್ಮನವರ ಸಂಗೀತ, ನಮ್ಮವರೇ ಆದ ಶ್ರೀಮತಿ ಉಮಾದಾಸ್‌ರವರು ನಮ್ಮ ಭಾಷೆಯಲ್ಲಿ ರಚಿಸಿದ ಸ್ವಾಗತ ಗೀತೆಗೆ ಶ್ರೀಮತಿ ಶುಭಾರಾವ್‌ರವರ ಸಂಗೀತ ಸಂಯೋಜನೆಯಲ್ಲಿ ನಮ್ಮವರೇ ಹದಿನೈದು ಸದಸ್ಯರು ಹಾಡಿದ್ದು, 'ರಾಷ್ಟ್ರಪ್ರಶಸ್ತಿ' ಪಡೆದ ಗುರುಪ್ರಸನ್ನ ಶ್ರೀ ಪ್ರಜ್ವಲ್ ಸತ್ಯನಾರಾಯಣ ಕೊಳಲಿಗೆ ಪಕ್ಕವಾದ್ಯ ನುಡಿಸಿದ್ದು, ಕುಮಾರಿ ಸಾಯಿ ಸಿಂಧೂರಳ ಭರತನಾಟ್ಯ ಮನರಂಜಿಸಿತು. ಎಲ್ಲರ ಹೆಸರು ಹೇಳಬೇಕಿದ್ದರೂ ಸ್ಥಳವಕಾಶವಿಲ್ಲದೆ, ಭಾಗವಹಿಸಿದ ಪ್ರತಿಯೊಬ್ಬರಿಗೂ ಕಾರ್ಯಕಾರಿ ಸಮಿತಿ ಶುಭಕೋರುತ್ತದೆ.

ಸಂಘದ ಹಿರಿಯ ಸದಸ್ಯ ಶ್ರೀ ಬೆಟ್ಟಕೋಟೆ ರಾಮಸ್ವಾಮಿಯವರು ಈ ಬಾರಿಯ "ರಾಷ್ಟ್ರೀಯ ಯುವ ಪ್ರಶಸ್ತಿ" ಪಡೆದ ಶ್ರೀ ಗುರುಪ್ರಸನ್ನ ಗುಂಡಪ್ಪರವರಿಗೆ ಸನ್ಮಾನಿಸಿದ್ದು ವಿಶೇಷ.

ಹಿಂದಿನ ವರ್ಷದಂತೆ ಈ ಬಾರಿಯೂ ಕಾರ್ಯಕ್ರಮ ನಡೆದ ಕಲ್ಯಾಣಮಂಟಪದ ವೆಚ್ಚ ಪ್ರಾಯೋಜಿಸಿದ ದಾನಿ ಶ್ರೀ ಕೃಷ್ಣನ್‌ರವರಿಗೆ ಹಾಗೂ ಪ್ರತ್ಯಕ್ಷ-ಪರೋಕ್ಷವಾಗಿ ನೆರವು ನೀಡಿ ಸಹಕರಿಸಿದವರೆಲ್ಲರಿಗೂ ಕಾರ್ಯಕಾರಿ ಸಮಿತಿ ಆಭಾರಿ.

ನಮ್ಮ ಸಂಘದ ಕಾರ್ಯಕ್ರಮಗಳನ್ನು ಮೆಚ್ಚಿ ದೂರವಾಣಿ ಹಾಗೂ ಪತ್ರಗಳನ್ನು ಬರೆದ ಸಜ್ಜನರಿಗೆ ವಂದನೆಗಳು. ಸಂಘವು ಯಾವುದೇ ರೀತಿಯಿಂದ ಹಣ ಪಡೆದರೂ ಅದಕ್ಕೆ ಲೆಕ್ಕವಿರುತ್ತದೆ. ಯಾವುದೇ ರೀತಿ ಟೀಕೆ-ಉತ್ತಮ ಸಲಹೆಗಳನ್ನು ಸಂಘ ಸ್ವಾಗತಿಸುತ್ತದೆ. ಆದರೆ ಹೆಸರು ವಿಳಾಸ ತಿಳಿಸದ ಪತ್ರಗಳಿಗೆ ಮನ್ನಣೆ ನೀಡಬಾರದೆಂದು ಕಾರ್ಯಕಾರಿ ಸಮಿತಿ ತೀರ್ಮಾನಿಸಿದೆ.

ಈ ವರ್ಷದ ದಿನಚರಿ ಕ್ಯಾಲೆಂಡರ್ ಸದಸ್ಯರಿಗೆ ಉಚಿತವಾಗಿ ವಿತರಿಸಲಾಗುವುದು. ಪ್ರಾಯೋಜಕರಿಗೆ ವಂದನೆಗಳು.


ನಮ್ಮ ಸಮುದಾಯದ ಕುಟುಂಬದ ದುಡಿಯುವ ಪ್ರತಿಯೊಬ್ಬರೂ ಸದಸ್ಯರಾಗಿಯೋ ಅಥವಾ ಪೋಷಕರಾಗಿಯೋ ಇರಬೇಕೆಂಬ ಹಂಬಲ ನಮ್ಮದು-ಸಹಕಾರ ನಿಮ್ಮದು.

ನಮಸ್ಕಾರ.

■ ಎಸ್. ಸೋಮಸುಂದರ

## ಮೈ.ಮಂ.ದ್ರಾ.ಬೃ.ಸಂಘದ ಕಾರ್ಯಕಾರಿ ಸಮಿತಿ

| | |
|---|---|
| ಅಧ್ಯಕ್ಷರು : | **ಎಸ್. ಸೋಮಸುಂದರ**, ಬೆಂಗಳೂರು |
| ಉಪಾಧ್ಯಕ್ಷರು : | **ಕೆ.ಬಿ. ಮುರಳಿ**, ಬೆಂಗಳೂರು |
| | **ಕೆ. ಮಂಜುನಾರಾಯಣ್**, ಬೆಂಗಳೂರು |
| ಕಾರ್ಯದರ್ಶಿ : | **ವಿ.ಎಸ್. ಮಣಿ**, ಕಿತ್ತಿಗಾನಹಳ್ಳಿ |
| ಸಹಕಾರ್ಯದರ್ಶಿ : | **ವಿ. ಅರುಣ**, ಬೆಂಗಳೂರು |
| ಖಜಾಂಚಿ : | **ಎಸ್. ಸತ್ಯನಾರಾಯಣ**, ಕಿತ್ತಿಗಾನಹಳ್ಳಿ |
| ಲೆಕ್ಕಪರಿಶೋಧಕರು : | **ಎಚ್.ಕೆ. ಶಶಿಧರ್**, ಬೆಂಗಳೂರು |
| ಸದಸ್ಯರು : | **ಆರ್.ಎ. ಈಶ್ವರನ್**, ಕಿತ್ತಿಗಾನಹಳ್ಳಿ |
| | **ಟಿ.ಎಸ್. ಮಣಿ**, ಕಿತ್ತಿಗಾನಹಳ್ಳಿ |
| | **ಎಸ್. ಶ್ರೀನಿವಾಸನ್**, ಹೊಸಕೋಟೆ |
| | **ಆರ್. ಗೋಪಾಲಕೃಷ್ಣ**, ಬೆಂಗಳೂರು |
| | **ಎಸ್. ಸಿ. ಶ್ರೀನಿವಾಸ**, ಸರ್ಜಾಪುರ |
| | **ಕೆ. ಬಿ. ಸುರೇಶ್**, ಬೆಂಗಳೂರು |
| | **ಬಿ. ಶ್ರೀಧರ್**, ಸಂಡೆ |
| | **ಕೆ. ಜಿ. ವೆಂಕಟೇಶ್**, ಬೆಂಗಳೂರು |
| | **ಸರಸ್ವತಿ ನಟರಾಜನ್**, ಬೆಂಗಳೂರು |



## ಹಾರ್ದಿಕ ಅಭಿನಂದನೆ

**ನಮ್ಮ ಸಂಘದ ಪೋಷಕರಾದ ಶ್ರೀ ಕೆ. ಗುಂಡಪ್ಪ ಮತ್ತು ಶ್ರೀಮತಿ ಲೀಲಾವತಿ ಅವರ ಪುತ್ರ ಶ್ರೀ ಜಿ. ಗುರುಪ್ರಸನ್ನ ಅವರಿಗೆ, ಕಂಜೀರ ವಾದ್ಯ ತಜ್ಞತೆಗೆ ಭಾರತೀಯ ಸಂಗೀತ ನಾಟಕ ಅಕಾಡೆಮಿಯ 2010ನೇ ಸಾಲಿನ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ್ ಪ್ರಶಸ್ತಿ ಲಭಿಸಿದೆ. ಶ್ರೀ ಜಿ. ಗುರುಪ್ರಸನ್ನ ಅವರಿಗೆ 'ಬೃಹಚ್ಚರಣ' ಪತ್ರಿಕೆಯು ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಶ್ರೀ ಗುರುಪ್ರಸನ್ನ ಅವರಿಗೆ ಅಕಾಡೆಮಿಯಿಂದ ಬಂದ ಒಕ್ಕಣೆ :**

The Sangeet Natak Akademi of India has pleasure in informing you that the general council of the Akademi at its meeting held on 13 and 14 December 2011 has selected you for the Ustad Bisrrnillah Khan yuva puraskar for 2010 for your achievement in the field of Carnatic Instrumental music (Kanjira). I extend my heartiest congratulations and felicitations on behalf of the members of the Akademi.

***Helen Acharya,***
***Acting Secretary, Sangeet Natak Akademi***

## ಬೃಹಚ್ಚರಣ ಗ್ರಾಮಗಳು–3. ಗುಂಜೂರು

**ಸ್ಥಳ :** ಬೆಂಗಳೂರು ದಕ್ಷಿಣ ತಾಲ್ಲೂಕು, ವರ್ತೂರು ಹೋಬಳಿಯಲ್ಲಿ, ವರ್ತೂರು–ದೊಮ್ಮಸಂದ್ರ ನಡುವೆ ಸುಮಾರು 350 ವರುಷಗಳ, ಮೈಸೂರು ಮಹಾರಾಜರ ಆಳ್ವಿಕೆಯ ಗ್ರಾಮ.

**ಇತಿಹಾಸ :** ಬೃಹತ್‌ಚರಣದ ಹಿಂದಿನ ವ್ಯಕ್ತಿ ಶ್ರೀ ಶೀನಪ್ಪ. ನಂತರ ವೆಂಕಟರಮಣಯ್ಯ ಮತ್ತೆ ಶೀನಪ್ಪ, ಗೋಪಾಲಯ್ಯ, ಸುಬ್ಬಯ್ಯ, ಸುಮಾರು ನಾಲ್ಕು ತಲೆಮಾರು ಅಂದರೆ 300 ವರ್ಷಗಳು.

ಇವರಲ್ಲಿ ಗೋಪಾಲಯ್ಯನವರು ಇಮ್ಮಡಿಹಳ್ಳಿ ಮತ್ತು ಸುಬ್ಬಯ್ಯ, ಕಾಮನಹಳ್ಳಿಯ ಕಡೆ ವಲಸೆಯಾಗಿ ಉಪ ಬೃಹತ್‌ಚರಣ ಗುಂಪುಗಳಾಗಿ ಮುಂದುವರೆಯಿತು.

**ಭಾಷೆ :** ಕನ್ನಡ, ತೆಲುಗು, ತಮಿಳು, ತಮಿಳ್ಗನ್ನಡ, ಉರ್ದು.

**ಬೃಹಚ್ಚರಣ ನಿವಾಸಿಗಳು :**

1. ಲಾಯರ್ ಶ್ರೀ ಜಿ. ವೆಂಕಟರಮಣಯ್ಯ ಮತ್ತು ಅವರ ಪತ್ನಿ ಶ್ರೀಮತಿ ಅಮ್ಮಣ್ಣಮ್ಮರವರಿಂದ ಕಿತ್ತಿಗಾನಹಳ್ಳಿಯ ಶ್ರೀನಿವಾಸ ದೇವಾಲಯ ಮತ್ತು ಬಡ ವಿದ್ಯಾರ್ಥಿಗಳಿಗೆ ಬೆಂಗಳೂರು ನಗರದಲ್ಲಿ ಬಡ ಬ್ರಾಹ್ಮಣ ವಿದ್ಯಾರ್ಥಿನಿಲಯ ಇವರ ಕೊಡುಗೆ.
2. ಡಿ.ವಿ.ಜಿ. ಅವರ ತಾಯಿ ಅಲಮೇಲಮ್ಮನವರು ಗುಂಜೂರಿನವರು
3. ಗುಂಜೂರಿನ ರುಕ್ಮಮ್ಮನವರು ಖ್ಯಾತ ಶೇಷಾದ್ರಿ ಗವಾಯಿರವರ ಮಡದಿ.
4. ಇಮ್ಮಡಿಹಳ್ಳಿಯ ಪ್ಲೀಡರ್ ಶ್ರೀನಿವಾಸಯ್ಯನವರು ಆ ಕಾಲದ ಖ್ಯಾತ ವಕೀಲರು. ಹಾಗೆಯೇ ಪದ್ಮನಾಭ್‌ರವರು ಉತ್ತಮ ಕಾಲೇಜು ಪ್ರಾಧ್ಯಾಪಕರು.
5. ನೂಲು ಶ್ರೀನಿವಾಸಯ್ಯನವರು ಗುಂಜೂರಿನ ಪ್ರಖ್ಯಾತರು.
6. ಕಾಮನಹಳ್ಳಿಯ ಸುಬ್ಬಯ್ಯನವರು ಗುಂಜೂರಿನ ಉಪಶಾಖಾ ಮುಖ್ಯರು.
7. ಗುಂಜೂರಿನಲ್ಲಿಯೇ ಮನೆತನ ಮುಂದುವರಿಸಿದವರಲ್ಲಿ ಶಾ॥ ನಾರಾಣಪ್ಪ, ಶಾ॥ ಶ್ರೀನಿವಾಸಯ್ಯ (ನಾರಾಣಪ್ಪರವರ ಮಗ), ಗೋಪಾಲಯ್ಯ, ಗುಳ್ಳಯ್ಯ, ರಾಮಚಂದ್ರಯ್ಯ, ವೆಂಕಟಗಿರಿಯಪ್ಪ (ಅಣ್ಣಯ್ಯ), ಮುಂತಾದವರು.
8. ಪ್ಲೀಡರ್ ಶ್ರೀನಿವಾಸಯ್ಯನವರ ಸುತೆ ಅನಸೂತ ಖ್ಯಾತ ನಿವೃತ್ತ ಮಹಿಳಾ ನ್ಯಾಯವಾದಿ ಹಾಗೂ ಡಾ. ಜಿ.ಎಸ್. ಕಲ್ಯಾಣಿ ಪ್ರಥಮ ಮಹಿಳಾ ವೈದ್ಯರು.
9. ಡಿಯರ್ ಬ್ರದರ್ ಎಂದೇ ಬೃಹತ್‌ಚರಣದಲ್ಲಿ ಕರೆಯಲ್ಪಡುವ ಶ್ರೀನಿವಾಸಯ್ಯ (ಯಮಲೂರು) ಖ್ಯಾತ ಲೆಕ್ಕಿಗರು ಮತ್ತು ಆಂಗ್ಲ ಭಾಷಾ ಪರಿಣಿತರು.

**ಸ್ಥಳ ಪರಿಚಯ :**

1. ಗುಂಜೂರಿನ ಗ್ರಾಮದೇವತೆ ಪಟಾಲಮ್ಮ ಮತ್ತು ಮುತ್ಯಾಲಮ್ಮ.
2. ಊರ ಮುಂದಿನ ಗುಡಿ ಹನುಮಂತ ದೇವರು.
3. ಉಮಾಮಹೇಶ್ವರ ದೇವಾಲಯ.
4. ಶ್ರೀ ವಿನಾಯಕ ದೇವಾಲಯ.

ಹೀಗೆ ಸುಮಾರು 20 ದೇವಾಲಯಗಳ ಬೀಡು.

ಸುಮಾರು ಎಂಟು ಅಶ್ವಥಕಟ್ಟೆಗಳು, ಇದರಲ್ಲಿ ಬೃಹತ್‌ಚರಣದ ಕೊತ್ತಕೊಂಡಪಲ್ಲಿ ಸುಬ್ಬಯ್ಯ ಮತ್ತು ಸುಬ್ಬಮ್ಮ ಪ್ರತಿಷ್ಠಾಪಿಸಿದ ನಾಗರಕಲ್ಲುಗಳು ಈಗಲೂ ಇದೆ.

■ **ಶ್ರೀ ಜಿ.ಎಸ್. ಸತ್ಯಮೂರ್ತಿ**

## ಚಿದಂಬರ ತತ್ತ್ವ

ಚಿದಂಬರೆಂದರೆ ಹೋಗುವುದೆಲ್ಲಾ ಚಿಂತೆಯು ತಾ ಬಿಟ್ಟು
ಚಿದಂಬರೆನ್ನದೆ ಇದ್ದರೆ ನೋಡು ಹೋದಿ ನೀ ಕೆಟ್ಟು

ಕಾಮ ಕ್ರೋಧವೆಂಬ ಕೆಟ್ಟ ಗುಣಗಳನು ಮೊದಲು ಆಚೆಗಟ್ಟು
ಸ್ವಾಮಿ ಚಿದಂಬರ ಸತ್ಯಚಿದಂಬರ ಅನ್ನು ಚಿತ್ತಗೊಟ್ಟು
ನೇಮತಪ್ಪಿ ನೀ ನಡೆಯಲು ಬೇಡ ಬಿದ್ದೀತು ಪೆಟ್ಟು
ಪ್ರೇಮದಿಂದಲಿ ಪ್ರಾರ್ಥಿಸು ದೇವನ ಮೇಲೆ ಮನಸು ಇಟ್ಟು

ದೇವನ ಒಲಿಸುವ ನಿರ್ಧಾರದಲಿ ನಿಲ್ಲು ಪಣವ ತೊಟ್ಟು
ಸಾವು ಬಂದರೂ ಸಂಕಟಗಳನು ಸೈರಿಸು ಎದೆಗೊಟ್ಟು
ಬೇವು ಮುಂದೆ ಅದು ಬೆಲ್ಲವಾಗುವುದು ಬರೆದುಕೊ ಈ ಗುಟ್ಟು
ಭಾವಕೆ ಒಲಿದು ಬರುವ ಚಿದಂಬರ ಆಗ ದಡವ ಮುಟ್ಟು

ತಂದೆ ತಾಯಿಗಳ ಮೇಲೆ ಎಂದಿಗೂ ಮಾಡಬೇಡ ಸಿಟ್ಟು
ನೊಂದು ಅವರೊಂದುಸಿರು ಹಾಕಲು ಹೋದಿ ನೀ ಸುಟ್ಟು
ಬಂದು ಚಿದಂಬರನೆಂದು ಕುಣಿದು ನೀ ಚಪ್ಪಾಳೆ ತಟ್ಟು
ಬಂದ ಕಷ್ಟಗಳ ತೊಡೆದುಹಾಕುವ ಅವನು ಹರುಷ ಪಟ್ಟು

ಪರರ ಹಿಂಸಿಸಿ ಸಿರಿಯ ಸೊಕ್ಕಿನಲಿ ಮರೆಯಬೇಡ ಅಷ್ಟು
ಹಿರಿಯ ಆತ ಶ್ರೀ ಶೇಷಾಚಲನ ಕೈಲಿದೆ ನಮ್ಮ ಜುಟ್ಟು
ಗಿರಿ ಗಿರಿ ಎಂದು ತಿರುಗಿ ತಿಳಿದಿಕೊ ಸಾರವೆಲ್ಲಾ ಒಟ್ಟು
ಗುರುವು ಚಿದಂಬರನಡಿಗೆ ಬಿದ್ದು ನೀ ಭಕ್ತಿಯ ಮನೆ ಕಟ್ಟು

ಬಿದ್ದು ಹೋಗುವ ನಶ್ವರ ದೇಹಕೆ ಹಿಗ್ಗುವೆ ಏಕಿಷ್ಟು
ಬಿದ್ದು ಹೋಗಲು ಬೆಂಕಿಯ ಹಚ್ಚಲು ಬಾಳೆಂಬುದೆ ಇಷ್ಟು
ಇದ್ದಾಗಲೇ ನೀ ಪುಣ್ಯದ ಫಲವನು ಪಡೆದುಕೊ ಸಾಕಷ್ಟು
ಮುದ್ದು ಚಿದಂಬರನಡಿಗೆ ಬಿದ್ದು ನೀ ಮುಕ್ತಿಯ ಮನೆ ಮುಟ್ಟು

■ ಹೆಚ್.ಪಿ. ರಾಮಕೃಷ್ಣ (ಕಿಟ್ಟಿ)

## ಒಪ್ಪಡ್ತಿ ಮಡಿ ಎಂಗಳ್ದು

ಒಪ್ಪಡ್ತಿ ಮಡಿ ಎಂಗಳ್ದು? – ರಘು
ನಾಥನೆ ನೆನಪೀಚ್ಕೂಳಾದೆ ಇರಕರ್ ಮಡಿ
ಪರಮಪದಮೆ ಅನ್ನಿ ನೆನಪೀಚ್ಕೂಳಾದೆ ಪಡಂಜಜಾಮಿಳು
ಒಪ್ಪೋದೊ ಆಚರೀಚಿರಂದ್ ಮಡಿ ಒಪ್ಪಡತಾದ್ದು?
ಪರಮಪುರುಷುನುಕು ಫಲು ಕುಡ್ತ್ ಶಬರಿ
ಸಂತೋಷ್ಮೆ ಪಣ್ಣಿರಂದ್ ಮಡಿ ಒಪ್ಪಡತಾದ್ದು?
ಮೊಸಳೆಗಿ ಇರಕರ್ ಕೊಳತಿ ಅಪ್ಡೆ
ಮನಸ್ಲೆ ವಿಷು ನೆರಂಜ್‌ಗುಂಡು
ನಾಕ್ಲೆ ತೇನೆಯ್ಯಿವಚ್ಕುಂಡು
ಪಣ್‌ರ್ ಕಾರ್ಯ್ರು ವ್ಯರ್ಥು ತಾನೇ
ಮನಸ್ಲೆ ಪರಿಶುದ್ಧು ಪಣ್ಣಿ
ವೇರೇಲ್ವಾಳ್ಕು ಉಪಕಾರು ಪಣ್ಣಿ
ಧರಣಿಜೆ ಅರಸು ಚಂಪಕಧಾಮ್ನೆ
ನೆನಪೀಚ್ಕುಳ್ಳುದ್ದೇ ಶುದ್ದಮಾನ್ ಮಡಿ.

ಕನ್ನಡ ಮೂಲ : ವೈ.ಎಸ್. ಗುಂಡಪ್ಪ
ಬೃಹಚ್ಚರಣ ಭಾಷೆಗೆ : ವೈ.ಜಿ. ಗಿರಿಶಾಸ್ತ್ರಿ

## ಬಾಳ ಮುಸ್ಸಂಜೆಯಲ್ಲಿ



ದೈಹಿಕ ಶಕ್ತಿ, ಮಾನಸಿಕ ಬಲ ಎರಡೂ ಕುಸಿಯುತ್ತಾ, ದೇಹದ ತೇಜಸ್ಸು ಕರಗುತ್ತಾ ಕಣ್ಣು ಮಂಜಾಗಿ, ನಡಿಗೆ ತಡವರಿಸಲು ಆರಂಭವಾಗಿ ಮನುಷ್ಯನ ಬದುಕಿನಲ್ಲಿ ಧುತ್ತೆಂದು ಎದುರಾಗುವ ಮುಪ್ಪು ಈ ಭೂಮಿಯಲ್ಲಿ ಜನ್ಮ ತಳೆದ ಎಲ್ಲರಿಗೂ ಅನಿವಾರ್ಯವೆಂಬುದು ನಿಷ್ಠುರವಾದ ಸತ್ಯ! ಆದರೆ ಆವರೆಗೆ ಆವರಿಸಿಕೊಂಡು ಬಂದ ಹರೆಯದ ಹುಮ್ಮಸ್ಸನ್ನು ಕಳೆದುಕೊಳ್ಳಬೇಕಾಗಿ ಬಂದಾಗ ತನ್ನ ದೇಹವೇ ತನ್ನದಲ್ಲ ವೇನೋ ಎನ್ನುವಷ್ಟು ಮಾರ್ಪಾಟಾಗಿ ಬಿಡುವಾಗ ಸಿನಿಕತನ, ಸಿಡುಕು, ಕೋಪತಾಪಗಳೆಲ್ಲಾ ವ್ಯಕ್ತಿಯ ಸ್ವಭಾವದಲ್ಲಾಗುವ ಏರುಪೇರುಗಳು.

ಆದರೆ 'ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ' ಎನ್ನುವ ಉಕ್ತಿಯಂತೆ ವೃದ್ಧರ ವ್ಯಕ್ತಿತ್ವ. ಅವರ ಕೋಪತಾಪಗಳು ಕ್ಷಣಿಕ. ವಯಸ್ಸಾದವರು ಯಾರಿಗೂ ನೋವುಂಟು ಮಾಡುವ ಪ್ರವೃತ್ತಿಗೆ ಸೇರುವುದಿಲ್ಲ. ಅಪಾರ ಅನುಭವದಿಂದ ಅವರು ಹೇಳುವ ಪ್ರತಿ ಮಾತು ಮುಂದಿನ ಪೀಳಿಗೆಗೆ ದಾರಿ ದೀಪವಾಗುತ್ತದೆ. ಪ್ರತಿಯೊಂದು ಮನೆಗೂ ವೃದ್ಧರ ಅವಶ್ಯಕತೆ ಇರುತ್ತದೆ. "ಒಲೆಗೊಂದು ಅಡಿಕೋಲು, ಮನೆಗೊಂದು ಮುದಿಗೊರಡು" ಎನ್ನುವ ಗಾದೆ ಮಾತು ಸುಳ್ಳಲ್ಲ. ಸಂಸಾರದ ಆಗುಹೋಗುಗಳಲ್ಲಿ ಕುಟುಂಬದ ದೈನಂದಿನ ವ್ಯವಹಾರದಲ್ಲಿ ವೃದ್ಧರ ಪಾತ್ರ ಅತಿ ಮಹತ್ವದ್ದು. ಅನೇಕ ಸಲ ಕೌಟುಂಬಿಕ ತೀರ್ಮಾನಗಳನ್ನು ತೆಗೆದುಕೊಳ್ಳುವುದರಲ್ಲಿ ಇಂದಿನ ಯುವ ದಂಪತಿಗಳು ಅಸಮರ್ಥರಾದಾಗ ಮನೆಯಲ್ಲಿರುವ ವೃದ್ಧರ ಸಹಾಯ ಹಸ್ತ ಅನಿವಾರ್ಯ. ಬಿಡಿಸಲಾಗದ ಕೌಟುಂಬಿಕ ಸಮಸ್ಯೆಗಳು ಬಗೆ ಹರಿದು, ಮತ್ತೆ ಮನೆಯಲ್ಲಿ ಶಾಂತಿ, ನೆಮ್ಮದಿ ನೆಲೆಸುತ್ತವೆ.

■ ಎನ್. ಚಂದ್ರಮೌಳಿ



## ಅಮ್ಮ

ಅಮ್ಮ ನೀನೆಂತು ಚೆಲುವೆ, ಹೃದಯದಲಿ |
ನಿನ್ನ ಶ್ರಮ ಎರೆದು ಬೆಳಸಿದೆ, ಪ್ರೀತಿಯಲಿ ||

ನಾ ಮರೆಯೆ ಆ ದಿನಗಳ ಪರಿಪಿಡಿ |
ನಿನ್ನ ನೆನೆಪು ಕಾಡುತ್ತಿದೆ ದಿನಪಿಡಿ ||

■ ಕಾಚರಕನಹಳ್ಳಿ ನಟರಾಜ್

# ವೈ.ಎಸ್. ಗುಂಡಪ್ಪ

ಯಲಹಂಕ ಸುಬ್ರಹ್ಮಣ್ಯಯ್ಯ ಗುಂಡಪ್ಪ (1905 – 1998) ಸಂಕ್ಷಿಪ್ತವಾಗಿ ವೈ.ಎಸ್.ಜಿ. ಈ ನಾಡು ಕಂಡ ಅಪ್ರತಿಮ ಮೇಧಾವಿಗಳು. ಆನೇಕಲ್ಲಿನಲ್ಲಿ ಜನಿಸಿ, ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿ, ಚಿಂತಾಮಣಿಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡ ವೈ.ಎಸ್.ಜಿ.ಯವರದು ಸಂಕೀರ್ಣ ವ್ಯಕ್ತಿತ್ವ. ಮಕ್ಕಳಲ್ಲಿ ನೈತಿಕತೆಯನ್ನು ತುಂಬುವ ಸದುದ್ದೇಶದಿಂದ ಹೆಚ್ಚು ಸಂಬಳ ಬರುತ್ತಿದ್ದ ಉದ್ಯೋಗವನ್ನು ತೊರೆದು ಶಿಕ್ಷಕ ವೃತ್ತಿ ಹಿಡಿದು ಅದರಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಿ, ಆದರ್ಶ ಶಿಕ್ಷಕರೆನಿಸಿಕೊಂಡು ರಾಷ್ಟ್ರಪ್ರಶಸ್ತಿಗೆ ಭಾಜನರಾದರು (1963).

ಕನ್ನಡ ಸಾಹಿತ್ಯಕ್ಕೆ ವೈ.ಎಸ್.ಜಿ. ಮೌಲಿಕ ಕಾಣಿಕೆಯನ್ನು ನೀಡಿದ್ದಾರೆ. ವಿಶೇಷವಾಗಿ ಶಿಶು ಸಾಹಿತ್ಯದ ರಚನೆಯಲ್ಲಿ ಅವರು ಪರಿಣಿತರಾಗಿದ್ದರು. ಧ್ರುವ, ಕಬೀರ, ಚಂದ್ರಹಾಸರನ್ನು ಕುರಿತು ಅವರು ಬರೆದ ನಾಟಕಗಳು ಮಕ್ಕಳ ಮೇಲೆ ಸತ್ಪರಿಣಾಮವನ್ನುಂಟು ಮಾಡಿವೆ. ಮಕ್ಕಳೊಡನೆ ಒಡನಾಟ ಅವರಿಗೆ ತುಂಬಾ ಅಚ್ಚುಮೆಚ್ಚು. ತಮ್ಮನ್ನು 'ಮಕ್ಕಳ ಗುಂಡ' ಎಂದೇ ಕರೆದುಕೊಳ್ಳುತ್ತಿದ್ದರು. ಲಕ್ಷ್ಮಣ ಮೂರ್ತಿಯನ್ನು ಕುರಿತು ಬರೆದ 'ಭ್ರಾತೃಭಕ್ತಾಗ್ರಣಿ ಲಕ್ಷ್ಮಣಮೂರ್ತಿ' ಕಾದಂಬರಿ 1925ರಲ್ಲಿ ಮದರಾಸು ಸೆಕೆಂಡರಿ ಶಾಲೆಗಳಿಗೆ ಪಠ್ಯವಾಗಿತ್ತು. ವೈ.ಎಸ್.ಜಿ.ಯವರು ತಮ್ಮ ಕುಲದೈವ 'ಬನ್ನೇರುಘಟ್ಟದ ಚಂಪಕಧಾಮ' ಅಂಕಿತದಲ್ಲಿ ಅಸಂಖ್ಯಾತ ಭಕ್ತಿಗೀತೆಗಳನ್ನು ಬರೆದಿದ್ದಾರೆ. ಇವರು ಬರೆದ ಮಮತಾಮೋಕ್ಷ, ವಿಧಿವಿಲಾಸ, ಅದೃಷ್ಟ ರಂಗ ನಾಟಕಗಳನ್ನು ಸಿ.ಬಿ. ಮಲ್ಲಪ್ಪನವರು ತಮ್ಮ ನಾಟಕ ಸಂಸ್ಥೆಯ ಮೂಲಕ ಅಭಿನಯಿಸಿದ್ದಾರೆ. ಗೋಂದಾವಲಿ ಶ್ರೀ ಬ್ರಹ್ಮಚೈತನ್ಯರ ಅನುಗ್ರಹಕ್ಕೆ ಪಾತ್ರರಾದ ವೈ.ಎಸ್.ಜಿ. ರಾಮನಾಮ ಜಪಾನುಷ್ಠಾನ ನಿರತರಾಗಿ ತಮ್ಮ ಜೀವನವನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡು ಆದರ್ಶಪ್ರಾಯರೆನಿಸಿಕೊಂಡರು. ಅನೇಕ ಸಂಘಟನೆಗಳ ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರಾದರು.

ಚಿಂತಾಮಣಿಯಲ್ಲಿ 'ಸಾಹಿತ್ಯಕೂಟ' ಸಾಂಸ್ಕೃತಿಕ ಸಂಘಟನೆಯನ್ನು ಸ್ಥಾಪಿಸಿ (1948) ನಿತ್ಯ ವ್ಯಾಸಂಗ ಗೋಷ್ಠಿ, ವಾರದ ಕಾರ್ಯಕ್ರಮ ಆರಂಭಿಸಿ (1957) ಪ್ರತಿ ಶನಿವಾರ ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ, ಸಂಗೀತ, ಆಧ್ಯಾತ್ಮಿಕ, ಧಾರ್ಮಿಕ ವಿಚಾರಗಳ ಕಾರ್ಯಕ್ರಮ ನಡೆಸಿಕೊಂಡು ಬಂದ ವೈ.ಎಸ್.ಜಿ. ತಾವು ಜೀವಿಸಿರುವವರೆಗೂ ಸಾಹಿತ್ಯಕೂಟದ ಏಳಿಗೆಗಾಗಿಯೇ ತಮ್ಮ ಬದುಕನ್ನು ಮುಡುಪಾಗಿಟ್ಟರು. ಅವರು ಭಾಗವಹಿಸಿದ್ದ ಸಾಹಿತ್ಯ ಕೂಟದ ಕೊನೆಯ ಕಾರ್ಯಕ್ರಮ 2159ನೆಯದು. ಶನಿವಾರದ ಕಾರ್ಯಕ್ರಮ ಇಂದಿಗೂ ನಡೆದುಕೊಂಡು ಬರುತ್ತಿದೆ. ವೈ.ಎಸ್.ಜಿ. ಅವರ ಆಯ್ದಕೃತಿಗಳ ಸಂಗ್ರಹ 'ಬಂಗಾರದಂಗಾಲು' (1984). ಅವರ ಸಮಗ್ರ ಗೀತೆಗಳ ಸಂಕಲನ 'ವೈ.ಎಸ್.ಜಿ. ಒಂದು ಚಿತ್ರಣ ಮತ್ತು ಬಿಡಿ ಹೂಗಳು' (2000) ಪ್ರಕಟವಾಗಿವೆ. ವೈ.ಎಸ್.ಜಿ. ಸಾಹಿತ್ಯ, ಸಾಂಸ್ಕೃತಿಕ ಜಗತ್ತಿನ ಪುಣ್ಯಜೀವಿ.

■ ವೈ.ಜಿ. ಗಿರಿಶಾಸ್ತ್ರಿ

## ಪದಬಂದು – 3

**ವಡತಟ್ಟಿಅನ್ನು ವಲತಟ್ಟು (ಎಡದಿಂದ ಬಲಕ್ಕೆ)**

1. ಅಡಕಲೇಲೆ ತೊಡಕುದ್ದು = 4 (ಅಡುಗೆಮನೆಯಲ್ಲಿ ಚಿರುದಿಂಡಿಗಳನ್ನು ಹುಡುಕು)
3. ಕನ್ನಡತ್ಲೆ ಗಣೇಶು = 3 (ಕನ್ನಡದಲ್ಲಿ ಗಣೇಶ)
5. ಒಸಾರಕ ಇರಕರ್ ಪಾತ್ರೆ = 3 (ಉದ್ದಕ್ಕಿರುವ ಪಾತ್ರೆ)
6. ಅಡಕಲೇಲೆ ಇರ್‌ಕರ್ ಪುಳುವು = 3 (ಅಡಿಗೆಮನೆಯಲ್ಲಿರುವ ಕಪ್ಪುಹುಳು)
7. 'ಉಟ್ಟೊಡು' ಇದಕು ವಿರುದ್ಧತಿ ಪದು = 4 (ಬಿಟ್ಟು ಬಿಡು–ಇದಕ್ಕೆ ವಿರುದ್ಧ ಪದ)
11. ಕೂಟಿ = 3 (ಕರೆದೆ)
13. ಪರಷೇಲೆ ಸ್ವಾಮಿದೆ ಪ್ರಸಾದು = 4 (ಜಾತ್ರೆಯಲ್ಲಿ ದೇವರ ಪ್ರಸಾದ)
16. ಪಳಗನ್ನಡತ್ಲೆ ಮಾಣಿಕ್ಯು = 3 (ಹಳಗನ್ನಡದಲ್ಲಿ ಮಾಣಿಕ್ಯ)
17. ತೀಂಜಿ ಪೋಂದು = 2 (ಸೀದು ಹೋದದ್ದು)

**ಮೇಲಿ ಅನ್ನು ಕೀಳ್ಕು (ಮೇಲಿನಿಂದ ಕೆಳಕ್ಕೆ)**

1. ಅಣ್ಣು ತಂಬಿಮಾರ್ದ್ದ ಹಾಂಬ್ಡ್ಯಾಮಾರು = 4 (ಅಣ್ಣತಮ್ಮಂದಿರ ಹೆಂಡತಿಯರು)
2. ಚಳಿಗಾಲತ್ಲೆ ವರರ್ ಕಾಯಿಲೆ = 5 (ಛಳಿಗಾಲದಲ್ಲಿರುವ ಬರುವ ಖಾಯಿಲೆ)
3. ಜನು ಚೇಂದಪ್ಪೊ ಆಗುರು ಗಲಾಟೆ=4 (ಜನಸೇರಿದಾಗ ಆಗುವ ಗಲಾಟೆ)
4. ಹಾತಿ ಪಿನ್ನಿ ಜಾಗ = 4 (ಮನೆಯ ಹಿಂದಿನ ಜಾಗ)
8. ಒರ್ತ್ರುಕ್ಕ ಒರ್ತರು ತಗಲುದ್ದು = 2 (ಒಬ್ಬರಿಗೊಬ್ಬರು ತಾಗುವುದು)
9. ತರಕಾರಿಗಿ ಪೋಟ್‌ಪುಳಿ = 3 (ತರಕಾರಿಗಳು ಹಾಕಿದ ಕೂಟು)
10. ಅನ್ನು ಚಾರೆ ಚೇತುದ್ದು = 3 (ಅನ್ನ ಸಾರನ್ನು ಕಲಸುವುದು)
11. ಅಡಕಲೇಲೆ ಇರಕರು ಕಟ್ಟೆಗಿ = 4 (ಅಡಿಗೆ ಮನೆಯಲ್ಲಿರುವ ಕಟ್ಟೆಗಳು).
12. ಗೊತ್ತಾಗಾದ್ದಪ್ಪೆ ಕುಡುಕರು ಕಾಟು = 4 (ಗೊತ್ತಾಗದಂತೆ ನೀಡುವ ಕಾಟ)
14. 'ರುಕ್ಮಿಣಿ'ಯೆ ಇಷ್ಡೆ ಕೂಡ್ರಾಳ್ದೆ = 3 (ರುಕ್ಮಿಣಿಯನ್ನು ಹೀಗೆ ಕರೆಯುತ್ತಾರೆ.)
15. ಪರಂದ್ ಪುಳ್ಳೆ/ಪಣ್ಣು = 2 (ಹುಟ್ಟಿದ ಮಗು)
17. ಆಯ್ಪೇಯ್ಬಿರುಕುದ್ದು = 2 (ಆಗಿಹೋಗಿರುವುದು)

**ಪದಬಂದು – 1 ಕು ಉತ್ತರುಂಗು**

**ವಡತಟ್ಟಿ ಅನ್ನು ವಲತಟ್ಟು (ಎಡದಿಂದ ಬಲಕ್ಕೆ)**

1. ಒಬನಾನು 3. ಅಡಕಲೆ 6. ಬುರುದೆ, 7. ಪಿಶಾದೆ, 8. ಮ್ಯೆಚಲು, 9. ನುಚ್ಚುನುಂಡೆ, 11. ರುಮಾಲು, 12. ಚಾಟಿ, 13. ಪಚ್ಚೆಗುರು, 15. ಪುಳ್ಳನ್ನು

**ಮೇಲಿ ಅನ್ನು ಕೀಳ್ಕು (ಮೇಲಿನಿಂದ ಕೆಳಕ್ಕೆ)**

1. ಒಡಂಬು, 2. ನುರಿ, 3. ಅತ್ತಿಪಿನ್ನೇನು, ಕಳದೆ 5. ಲೆಕ್ಕು, 8. ಮ್ಯೆಸೂರು, 10. ನುಂಗು, 13. ಪಳಪು, 14. ಗುಲ್ಕನ್ನು


**ಪದಬಂದು–2ಕು ಉತ್ತರುಂಗು ವಡತಟ್ಟಿ ಅನ್ನು ವಲತಟ್ಟುಕು**

1. ಪಾಲುಮಾರಿಕೆ, 3. ತಿತೀಪು, 5. ಕೊಡತಿ, 7. ವುಳಸೊಪ್ಪು, 8. ಬುಕ್ಕಚ್ಚಿ, 9. ತೋಕಾಶಿ, 10. ಪರವು, 11. ಇರಂಬಲು, 13. ಸಿಪ್ಪೆ, 14. ವುಡುಪು, 15. ಲುಕ್ಸಾನು, 16. ರುಬ್ಬು

**ಮೇಲಿ ಅನ್ನು ಕೀಳ್ಕು**

1. ಪಾಚಕೊ, 2. ಕೆನಾವು, 4. ಪುರಮಾಯಿಶಿ, 6. ತಿರುಂಬು, 10. ಪರಚಲು 11. ಇಳವು, 12. ಬಳಪು, 13. ಸಿಬರು

ಸರಿಯುತ್ತರ ಕಳಿಸಿದವರ ಹೆಸರುಗಳನ್ನು ಉತ್ತರಗಳೊಂದಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.



# ಬೃಹಚ್ಚರಣ–ಕನ್ನಡ : ದ್ವಿಭಾಷಿಕ ನಿಘಂಟು–ಕೆಲವು ವಿಶಿಷ್ಟ ಶಬ್ದಗಳು

11. **ಅಗರು (ನಾ)** ಆಸಾಮಿ, ಒಬ್ಬ ವ್ಯಕ್ತಿಗೆ ಗೊತ್ತಾಗದಂತೆ ಆ ವ್ಯಕ್ತಿಯನ್ನು ಸೂಚಿಸಲು ಬಳಸುವ ಪದ. [ ಇದೇ ಅರ್ಥವನ್ನು ಸೂಚಿಸಲು ಇನ್ನೆರಡು ಪದಗಳಿವೆ. ಅವೆಂದರೆ **ಪಚ್ಚೆಗರು** ಮತ್ತು **ಅಪ್ಪೈಚಾಮೀರಯ್ಯು**]
**ಅಂದ್ ಪಚ್ಚೆಗರು ವಂದದೆ** ಆ ಆಸಾಮಿ ಬಂದಿದೆ <ಅ+ಗುರು(=ಲಘು) ಸಂಸ್ಕೃತ
12. **ಅಪ್ಪೈಚಾಮೀರಯ್ಯು (ನಾ)** ಆಸಾಮಿ, ಅಗರು, ಪಚ್ಚೆಗರು
**ವಂದಿರ್‌ಕ್‌ರ್ ಅಪ್ಪೈಚಾಮೀರಯ್ಯು ಓದ್ ಕೆಟಿರಂದು?** ಬಂದಿರುವ ಆಸಾಮಿ ಏನು ಕೇಳಿದ್ದು?
ಅಪ್ಪ+ಅಯ್ಯ+ಸ್ವಾಮಿ+ಅರ್+ಅಯ್ಯು ಸ್ವಾಮಿ ಶಬ್ದ ಸಂಸ್ಕೃತ, ಉಳಿದವು ದ್ರಾವಿಡ
13. **ಪಚ್ಚೆಗರು (ನಾ)** ಆಸಾಮಿ, ಅಗರು, ಅಪ್ಪೈಚಾಮೀರಯ್ಯು
**ಪಚ್ಚೆಗರ್ದು ಉಳ್ಳುಳ್ಯೇ ಕಾರ್ಯುೕ** ಆಸಾಮಿಯದು ಒಳಗೊಳಗೇ ಕೆಲಸ.
ಪಚ್ (=ಹಸಿಯ, ಎಳಸಾದ) + ಅಗರು ಪಚ್ (ದ್ರಾವಿಡ) ಅಗರು (ಸಂಸ್ಕೃತ)
14. **ಒಬನಾನು (ನಾ)** ಉಪನಯನ, ಮುಂಜಿ, ಬ್ರಹ್ಮೋಪದೇಶ.
**ಒಟ್ಟೊರ್ಷುೕತ್ತು ಒಬನಾನು ಪಣ್ಣೂಡೋಣು** ಎಂಟು ವರ್ಷಕ್ಕೆ ಉಪನಯನ ಮಾಡಿಬಿಡಬೇಕು <ಉಪನಯನ ಸಂಸ್ಕೃತ
15. **ಹಾ̃ (ನಾ)** ಮನೆ, ನಿವಾಸ, ಜೀವಿಸುವ ಜಾಗ
**ಕುಪ್ಪಳ್ಳೀಲೆ ಕುವೆಂಪುದೆ ಹಾ̃ ನಾ ಪಾತವ್ನೆ** ಕುಪ್ಪಳ್ಳಿಯಲ್ಲಿ ಕುವೆಂಪು ಮನೆಯನ್ನು ನಾನು ನೋಡಿದ್ದೇನೆ <ಅಗಂ(ತಮಿಳು, =ಮನೆ) ಅಗಂ>ಅಹಂ>ಹಾ̃ ದ್ರಾವಿಡ
16. **ಹಾ̃ಂಬ್ಡ್ಯು (ನಾ)** ಗಂಡ, ಪತಿ **ಎಂದೆ ಹಾ̃ಂಬ್ಡ್ಯು ಶಾನೆ ನಲ್ಬು** ನನ್ನ ಗಂಡ ತುಂಬಾ ಒಳ್ಳೆಯವನು
ಹಾ̃ + ಒಡೆ̃ಯು = ಹಾ̃ಂಬ್ಡಯು~ (ಮನೆಯ ಒಡೆಯ) ದ್ರಾವಿಡ
17. **ಹಾ̃ಂಬ್ಡ್ಯ (ನಾ)** ಹೆಂಡತಿ, ಪತ್ನಿ
**ಹಾ̃ಂಬ್ಡ್ಯ ಊರುಕು ಪೋಯವಳೆ** ಹೆಂಡತಿ ಊರಿಗೆ ಹೋಗಿದ್ದಾಳೆ
ಹಾ̃ + ಒಡೆಯಳ್ = ಹಾ̃ಂಬ್ಡ್ಯ (ಇಲ್ಲಿ ಳ್ ಲೋಪವಾಗಿದೆ) ದ್ರಾವಿಡ
18. **ಹಾ̃ಂಬ್ಡ್ಯಾನ್ಹಾ̃ಂಬ್ಡ್ಯ (ನಾ)** ಗಂಡಹೆಂಡತಿ, ದಂಪತಿ **ಅಂದ್ ಹಾ̃ಂಬ್ಡ್ಯಾನ್ಹಾ̃ಂಬ್ಡ್ಯ ನನ್ನೆ ಹೊಂದ್ಕುಂಡವಾಳೆ** ಆ ದಂಪತಿಗಳು ಚೆನ್ನಾಗಿ ಹೊಂದಿಕೊಂಡಿದ್ದಾರೆ
ಹಾ̃ + ಒಡೆ̃ಯು + ಹಾ̃ + ಒಡೆಯಳ್ ದ್ರಾವಿಡ
19. **ಅಣಾಪಟ್ಟೆ (ಕ್ರಿ)** ಚುಡಾಯಿಸು, ಅನುಕರಿಸು
**ಅವ್ಪು ಎನ್ನೆ ಬಲೆ ಅಣಾಪಟ್ಟೆಯಾಕ್ರೊ** ಅವನು ನನ್ನನ್ನು ತುಂಬಾ ರೇಗಿಸುತ್ತಾನೆ < ದ್ರಾವಿಡ
20. **ವೆಕ್ರಿ (ಕ್ರಿ)** ಹಂಗಿಸು, ರೇಗಿಸು, ತೋರುಬೆರಳನ್ನು ಕೋತಿ ಕುಣಿಸುವುದು, ಗೇರು ಗೇರು ತಿಮ್ಮಣ್ಣ ಎಂದು ರೇಗಿಸುವುದು
**ಅವ್ಪು ಎನ್ನೆ ವೆಕ್ರೀಕಾನೆ ಇರುಕ್ರಾಂದೆ** ಅವನು ನನ್ನನ್ನು ಹಂಗಿಸತ್ತಾ ಇರುತ್ತಾನೆ. <ಎಕ್ರಿ(ತಮಿಳು) ದ್ರಾವಿಡ

[~ = ಅನುನಾಸಿಕೀಕರಣ] (ಮೂಗಿನ ಸಹಾಯದ ಉಚ್ಚಾರಣೆ)

■ ಕೆ.ಎಸ್. ಮಧುಸೂದನ

## ಓದು ಪಳಪಿ ಅರ್ತುೕ? (ನಮ್ದೆ ವಾತೇಲೆ ಕಗ್ಗ)

ಓದು ಪಳಪಿ ಅರ್ತುೕ? ಓದು ಪ್ರಪಂಚಿತಿ ಅರ್ತುೕ?
ಓದು ಜೀವ್ಪು ಪ್ರಪಂಚಂಗ್ಕಿ ಸಂಬಂದು?
ಕಾಂಬೀಕಾದೆ ಇಂಗೆ ಇರ್ಕುದ್ದು ಓದಾನ ಉಂಟಾ? ಅದೋದು?
ಜ್ಞಾನು ಪ್ರಮಾಣ್ಮಾ?–ಮಂಕುತಿಮ್ಮ 4

ಸ್ವಾಮಿ ಅಂಗುದ್ದದೋದು ಶಾನೆ ಇರಟಿ ಗುಹೆಯ?
ನಮಕು ಗೊತ್ತಾಗಾದೆ ಇರಕರ್ ಎಲ್ಲಾತ್ತಿ ಒಟ್ಟು ಪೇರಾ?
ಕಾಪಾಡರವ್ಪು ಒರ್ತ್ತು ಇರ್ಕರಪ್ಪೊ ಪ್ರಪಂಚ್ತಿ ಕತೆ ಒದುಕಿಪ್ಡೆ?
ಪರಪ್ಪು ಚಾವುಗು ಓದು – ಮಂಕುತಿಮ್ಮ 5

ಒಗಟೋದು ಇಂದ್ ಸೃಷ್ಟಿ? ಪಳಪಿ ಅರ್ತುೕ ಅದೋದು?
ಬಗಂಜಿ ಉಡವೀಕ್ರ್ವ ದಾರು ಆಶ್ಚರ್ಯುೕಮೆ ಇತ್ತೆ?
ಪ್ರಪಂಚ್ಮೆ ನಿರ್ಮೀಚಿರಕ್ರ್ ಕೈ ಒನ್ನಾನ್ಕ ಒದುಕು ಇಪ್ಡೆ
ವೇರ್ವೇರೆ ಜೀವತಿ ತೀರು – ಮಂಕುತಿಮ್ಮ 6

ಪಳಪುಕು ದಾರು ಯಜಮಾನ್ರು ಒರ್ತ್ನೋ ಶಾನೆ ಪೇರೋ?
ವಿಧಿಯೊ ಪೌರುಷಮೊ ಧರ್ಮುೕಮೊ ಕುರುಡುಬಲಮೋ?
ಕುದುರುದ್ದು ಅದೊಪ್ಡೆ ಇಂದ್ ಅವಸ್ತೇದೆ ಪಾಡು?
ಅದಿಗುದಿಯೆ ಗತಿಯೋದೋ? – ಮಂಕುತಿಮ್ಮ 7

ಕ್ರಮು ಒನ್ನು ಲಕ್ಷ್ಯು ಒನ್ನು ಅದ್ಯೋದು ಸೃಷ್ಟೀಲೆ?
ಬ್ರಮೀಕಿದ್ದು ಓದು ಅಪ್ಪೊಪ್ಪೊ ಕರ್ತೃದೆ ಮನಸು?
ಮಮತೆ ಇರಕರವ್ಪು ಅವ್ಪು ಆಯಿರಂದಕ ಜೀವುಂಗು
ಶ್ರಮು ಉಳುದ್ದು ಒದಕಿಪ್ಡೆ – ಮಂಕುತಿಮ್ಮ 8

■ ಅನು: ಕೆ.ಎಸ್. ಮಧುಸೂದನ

## ಶಿವಾಪುರು

ಚಿರಿ ಪಳ್ಳಿ ಅದು ಶಿವಾಪುರು
ನೀಂಗು ಕೆಟೇ ಇಲ್ಲೆ.
ಉಂಗಳ್ದೆ ನಕಾಶೇಲೆ ಒಂದ್ ಮೂಲೇಲ್ಯೂ
ಎಂಗಳ್ದೆ ಊರು ಇಲ್ಲೆ.
ಚಿರಿವೀದಿಗಿ ಊರುಟ್ಟು
ವೇರೆ ಒಂಗ್ಯೂ ಪೋಗುದ್ಲೆ.
ಕಾಲ್ವಳೀಲೆ ಉಳ್‌ಕು ವರೋಣು
ವೇರೆ ವಳಿ ಇಲ್ಲೆ.
ಉಳ್ಳೆ ವಂದ್ಕಲೂ ಉಂಗುಳ್ಕು ಚಿಕ್ಕುದ್ಲೆ
ನಾಂಗಿರಕರ್ ಮದ್ಯತಿ ಬಿಂದು
ಒಂಗೆ ನಿನ್ನುಂಡ್ಕ ಅಂಗ್ಯೆ ಮದ್ಯತಿ ಬಿಂದು ಚುತ್ತುದ್ದೆ
ಗುಂಡುರು ಅತ್ತಿ ಚುತ್ತು
ಸಿಟಿಕಿ ಹೋಲೀಚ್ಕುಂಡ್ಕ ಅಂತು ನಮ್ದೆ ಇಂದ್
ಗುಂಡುರು ಚಿರಸ್ನು
ಅವಾಳ್ದೆ ಇವಾಳ್ದೆ ಜೊತೆ ಒದಕು ಹೋಲೀಕಿದ್ದು
ಎಂಗಳ್ದೆ ಪಳಪು ಎಂಗಳ್ಕು.
ಇಂಗೆ ಗಟನೆಗಿ ಗಟೀಕಿದ್ಲೆ
ಚರಿತ್ರಿಕಿ ಇಲ್ಲೆ ಕಾರ್ಯುೕ
ಒಪ್ಪೋದೂ ಪರಿಗಿದ್ದು ನದಿ ಮಾತ್ರು
ಕತೆ ಪರವಾಕುತ್ತು ದಿನಮೂ.
ಎಂಗಳ್ಕು ಎಂಗಳ್ದೆ ಸ್ವಾಮಿಗದೆ
ರಾಕ್ಷಸರು, ದೆವ್ವು, ಬೂತು.
ಎಂಗಳ್ದೆ ಕೊರತೆಗಳೆ ಬರ್ತೀ ಪಣ್ರಾಳ್ದೆ
ಅವಾಳ್ದೆ ಮುನ್ನೆ ನಿನ್ನುಂಡು.

ಆಕಾಶ್ತಿ ಅಂಚಿ ಅತ್ತಟ್ಯೊ ಬಳಗು ವಳಂಜ್ಜ
ಅವಾಳೆ ಎಂಗಳ್ದೆ ಮದ್ಯೆ.
ಓದು ಚಿಕ್ಕಿನ್ಕಲೂ ಕೊಳಂದು ಪಂಚ್ರಾಳ್ದೆ
ಚಿಂತೆ ಎಂಗಳ್ಕು ಇಲ್ಲೆ.

ಕನ್ನಡ : ಡಾ. ಚಂದ್ರಶೇಖರ ಕಂಬಾರ
ಬೃಹಚ್ಚರಣತ್ತು : ಶೇಷಾಂಕ

# ಕೈಲಾಸ ಮಾನಸ ಸರೋವರ ಯಾತ್ರೆ

ಕೈಲಾಸ ಪರ್ವತವು ಪರಮೇಶ್ವರನ ಅವಾಸ ಸ್ಥಾನ. ಹಿಮಾಲಯ ಪರ್ವತಶ್ರೇಣಿಗಳಿಗೆ ಹೊಂದಿಕೊಳ್ಳದೇ ಹಿಮಾಲಯದಿಂದ ಅನತಿ ದೂರದಲ್ಲಿ ತನ್ನದೇ ಆದ ಹಿರಿಮೆಯಿಂದ ಮತ್ತು ವೈಭವದಿಂದ ಪ್ರತ್ಯೇಕವಾಗಿ ವಿಶಾಲವಾದ ಟಿಬೆಟ್ ಮೈದಾನದ ಪ್ರದೇಶದಲ್ಲಿ ಆಕಾಶಕ್ಕೆ ಚುಂಬಿಸುವಂತೆ ಸದಾ ಹಿಮಾಚ್ಛಾದಿತವಾಗಿ ಪ್ರಕಾಶ ಮಾನವಾಗಿ ವಿಶ್ವದ ಕೇಂದ್ರಬಿಂದುವಾಗಿ ವಿಜ್ರಂಭಿಸುತ್ತದೆ.

ಕೈಲಾಸಪರ್ವತ ಮತ್ತು ಮಾನಸ ಸರೋವರವು ಒಂದೇ ತಾಣದಲ್ಲಿದ್ದು ಒಂದಕ್ಕೊಂದು ಕೇವಲ 28 ರಿಂದ 30 ಕಿ.ಮೀಟರ್ ದೂರದಲ್ಲಿದೆ. ಕೈಲಾಸ ಪರ್ವತವು ಹಿಮಾಲಯ ಪರ್ವತದ ಶ್ರೇಣಿಯ ಭಾರತ ಚೀಣಾ ಗಡಿ ಪ್ರದೇಶದ ಕಾಲಾಪಾನಿ ಎಂಬ ಪ್ರದೇಶದಿಂದ ಈಶಾನ್ಯ ದಿಕ್ಕಿನಲ್ಲಿ ಸುಮಾರು 150 ಕಿ.ಮೀ. ದೂರದಲ್ಲಿದೆ. ಅಲ್ಲದೆ ನೇಪಾಳದ ಚೀನಾಗಡಿ ಪ್ರದೇಶದ ಜಾಗ್ಮು ಎಂಬ ಊರಿನಿಂದ ಉತ್ತರದಿಕ್ಕಿನಲ್ಲಿ ಸುಮಾರು 1120 ಕಿ.ಮೀ. ದೂರದಲ್ಲಿದೆ. ಮಾನಸ ಸರೋವರವು 320 ಚ.ಕಿ.ಮೀ. ವಿಸ್ತೀರ್ಣವುಳ್ಳದ್ದಾಗಿಯೂ 300 ಅಡಿ ಆಳವಾಗಿಯೂ 100 ಕಿ.ಮೀ. ಸುತ್ತಳತೆವುಳ್ಳದಾಗಿದೆ. ಇದು ಎಷ್ಟು ಅಗಾದವೋ ಅಷ್ಟೆ ಪಾವನವೂ ಮತ್ತು ಹಿರಿಮೆಯುಳ್ಳದ್ದಾಗಿದೆ. ಕೈಲಾಸ ಪರ್ವತದ ಎತ್ತರ 26000 ಅಡಿಗಳು. ಇದರ ಸುತ್ತಲೂ ಸಣ್ಣ ಸಣ್ಣ ಪರ್ವತಗಳು ಅಲಂಕಾರ ಪ್ರಾಯವಾಗಿದೆ. ಕೈಲಾಸ ಮಾನಸ ಸರೋವರ ಯಾತ್ರೆ ಎರಡು ಮಾರ್ಗಗಳಿಂದ ಸಾಧ್ಯ. ಎರಡೂ ಮಾರ್ಗಗಳಲ್ಲಿ ಅದರದೇ ಆದ ಪ್ರಕೃತಿ ಸೌಂದರ್ಯ ಅನುಕೂಲ ಪ್ರತಿಕೂಲ ವಿಚಾರಗಳು ಬಹಳಷ್ಟು ಇವೆ. ಕೈಲಾಸ ಪರ್ವತವು ಸ್ವಯಂ ನಿರ್ಮಿತವಾದದ್ದು. ಜೀವನದಿಗಳಾದ ಬ್ರಹ್ಮಪುತ್ರ, ಸಿಂಧೂ, ಸಟ್ಲಜ್ ಮತ್ತು ಕರ್ನಾಲಿ ಇವುಗಳು ಇಲ್ಲಿಂದ ಉಗಮವಾಗಿ ಭಾರತ ಮತ್ತು ನೇಪಾಳಗಳಲ್ಲಿ ಹರಿಯುತ್ತವೆ. ಈ ಪರಿಸರದ ಎಲ್ಲಾ ಜಾಗಗಳೂ ಪುಣ್ಯಕರವಾದವುಗಳು. ಕೈಲಾಸಪರ್ವತವು ರಾವಣ ಪರ್ವತ, ಹನುಮಾನ್ ಪರ್ವತ, ಪದ್ಮಸಂಭವ, ಮಂಜುಶ್ರೀ, ವಜ್ರಧರ, ಅವಲೋಕೇಶ್ವರ, ಶಾವರಿ, ಮುಂತಾದ ಇನ್ನೂ ಅನೇಕ ಪರ್ವತಗಳಿಂದ ಸುತ್ತುವರೆಯಲ್ಪಟ್ಟಿದೆ.

ಕೈಲಾಸ ಪರ್ವತವು ಕಮಲ ಪುಷ್ಪ ಕೇಂದ್ರ ಭಾಗವಾಗಿದೆ. ಈ ಸುತ್ತುವರೆಯಲ್ಪಟ್ಟ ಪರ್ವತಗಳು ಕಮಲದ ದಳಗಳಾಗಿಯೂ ತೋರಲ್ಪಡುತ್ತದೆ.

ಕೈಲಾಸ ಪರ್ವತದ ಪೂರ್ವ ಭಾಗವು ಸ್ಫಟಿಕದಿಂದ ಕೂಡಿದೆ ಎಂದೂ ಪಶ್ಚಿಮ ಭಾಗವು ಪದ್ಮರಾಗದಿಂದ ಕೂಡಿದೆ ಎಂದೂ ದಕ್ಷಿಣ ಭಾಗವು ಇಂದ್ರನೀಲದಿಂದಲೂ ಉತ್ತರ ಭಾಗವು ಬಂಗಾರದಿಂದಲೂ ಕೂಡಿದೆಯಾದ್ದರಿಂದ ಇದಕ್ಕೆ ರತ್ನಸಾನು ಎಂಬ ಹೆಸರು ವಿಖ್ಯಾತವಾಗಿದೆ. ಇದು ಕುಬೇರದ ವಾಸಸ್ಥಾನವೂ ಆಗಿದೆ. ತಮ್ಮನಾದ ರಾವಣನು ತನ್ನನ್ನು ಜಯಸಿ ಲಂಕೆ ಮತ್ತು ಪುಷ್ಪಕ ವಿಮಾನವನ್ನು ಸ್ವಾಧೀನಪಡಿಸಿಕೊಂಡ ಬಳಿಕ ಕುಬೇರನು ಪರಮೇಶ್ವರನನ್ನು ಒಲಿಸಿಕೊಂಡು ಕೈಲಾಸದಲ್ಲಿ ಅಲಕಾಪುರಿಯನ್ನು ನಿರ್ಮಿಸಿಕೊಂಡು ಯಕ್ಷರಾಜನಾದನು. ಕೈಲಾಸಪರ್ವತದ ಹಾದಿಯಲ್ಲಿ ಮಾನಸಸರೋವರ ಮತ್ತು ರಾಕ್ಷಸ ಸರೋವರ ಸಿಗುತ್ತದೆ. ರಾಕ್ಷಸ ಸರೋವರಕ್ಕೆ ರಾವಣ ಸರೋವರವೆಂದು ಕರೆಯುತ್ತಾರೆ. ರಾವಣನು ಶಿವನನ್ನು ಕುರಿತು ತಪಸ್ಸನ್ನು ಇಲ್ಲಿಯೇ ಮಾಡಿದನೆಂದು ಪ್ರತೀತಿ. ಈ ಸರೋವರದ ನೀರನ್ನು ಯಾರೂ ಉಪಯೋಗಿಸುವುದಿಲ್ಲ. ಕೈಲಾಸ ಮಾನಸ ಸರೋವರ ಯಾತ್ರೆಯು ಅಷ್ಟು ಸುಲಭ ಸಾಧ್ಯವಿಲ್ಲವಾದರೂ ಅಸಾಧ್ಯವಾದುದೇನೂ ಅಲ್ಲ. ಯಾತ್ರೆಗೆ ಬಹಳಷ್ಟು ಅನುಕೂಲತೆಗಳಿವೆ. ಯಾತ್ರೆಗೆ ದೃಢ ಸಂಕಲ್ಪವೇ ಬಹಳ ಮುಖ್ಯ.

ಕೈಲಾಸ ಮಾನಸ ಸರೋವರ ಯಾತ್ರೆಯು ಭಾರತ ಅಥವಾ ನೇಪಾಳದ ಖಾಸಗಿ ಯಾತ್ರಾ ನಿರ್ವಾಹಕರ ಸಹಾಯದಿಂದ ವಿಮಾನದಿಂದಲೋ ಅಥವಾ ಬಸ್ ಮೂಲಕವೋ ಸಾಧ್ಯ. ನೇಪಾಳದ ಖಟ್ಮಂಡು ತಲುಪಿ ಅಲ್ಲಿಂದ ಚೈನಾ ದೇಶದ ಗಡಿಯವರೆಗೆ ಬಸ್ಸಿನಲ್ಲಿ ಪ್ರಯಾಣ ಮಾಡಿ ಗಡಿ ದಾಟಿದ ಮೇಲೆ ವಿಶಿಷ್ಟವಾದ ಜೀಪಿನಲ್ಲಿ 5 ದಿನಗಳ ಕಾಲದಲ್ಲಿ 1120 ಕಿ.ಮೀ. ದೂರ ಪ್ರಯಾಣಮಾಡಿ ಕೈಲಾಸ ಮಾನಸ ಸರೋವರನ್ನು ಸಂದರ್ಶಿಸಿ ಪುನಃ ಅದೇ ಮಾರ್ಗದಲ್ಲಿ ಹಿಂತಿರುಗಬಹುದು. ಇದಕ್ಕೆ ಕಾಲಾವಕಾಶ ಕನಿಷ್ಟ 18 ದಿನಗಳು ಮಾತ್ರ.

ಕೈಲಾಸಪರ್ವತದ ಮತ್ತು ಮಾನಸ ಸರೋವರದ ಪ್ರಥಮ ದರ್ಶನ ಪಡೆದ ನಾವು ಮತ್ತು ನಮ್ಮ ಜೊತೆಯಲ್ಲಿ ಇದ್ದವರು ಸಾಷ್ಟಾಂಗ ನಮಸ್ಕಾರ ಮಾಡಿದೆವು. ದುರ್ಬೀನಿನ ಸಹಾಯದಿಂದ ಮತ್ತೆ ಮತ್ತೆ ಕೈಲಾಸ ಪರ್ವತವನ್ನು ವೀಕ್ಷಿಸಿದೆವು.

ಜೀಪಿನಿಂದ ಇಳಿದ ತಕ್ಷಣವೇ ಎಲ್ಲರೂ ಮಾನಸ ಸರೋವರದ ಸ್ಪರ್ಶಕ್ಕಾಗಿ ಓಡಿದೆವು. ಮಾರನೆಯ ದಿನ ಬೆಳಿಗ್ಗೆ ಪುನಃ ಪೂರ್ತಿಯಾಗಿ ಸಂಕಲ್ಪ ಸ್ನಾನವನ್ನು ಮಾಡಿದೆವು. ಅಲ್ಲಿ ರುದ್ರ ಹೋಮ, ಚಮಕ ಸೂಕ್ತಗಳಿಂದ ಅಭಿಷೇಕ ಮಾಡಿದೆವು.

ನಮ್ಮ ಗುರುಗಳು ಹಿರಿಯರು ಮತ್ತು ಮಾತಾ ಪಿತೃಗಳ ಆಶೀರ್ವಾದದಿಂದ ನಮ್ಮ ಯಾತ್ರೆಯನ್ನು (ಕಠಿಣವಾದರೂ) ಸುಲಭೋಪಾಯದಲ್ಲಿ ನಾನು ಮತ್ತು ನನ್ನ ಪತ್ನಿ ಮುಗಿಸಿ ಬಂದೆವು.

■ ಎಸ್. ಶ್ರೀನಿವಾಸನ್

## ಸಿ.ವಿ.ಎಸ್. ಶಾಸ್ತ್ರಿ ನಿಧನಕ್ಕೆ ಅಶ್ರುತರ್ಪಣ

ಅಖಿಲ ಕರ್ನಾಟಕ ಬ್ರಾಹ್ಮಣ ಸಭಾದ ಅಧ್ಯಕ್ಷರಾದ **ಶ್ರೀ ಸಿ.ವಿ.ಎಲ್. ಶಾಸ್ತ್ರಿಯವರು** ನಮ್ಮನ್ನಗಲಿದುದಕ್ಕೆ ಬೃಹಚ್ಚರಣ ಸಂಘವು ಶ್ರದ್ಧಾಂಜಲಿ ಅರ್ಪಿಸಿದೆ.

ಚಿತ್ರರಂಗದ ದಿಗ್ಗಜ, ಸಮಾಜಸೇವಾ ಧುರೀಣ, ಕ್ರಿಯಾಶೀಲ ಉದ್ಯಮಿ, ಬ್ರಾಹ್ಮಣರ ಸಂಘಟನಾ ನೇತಾರರಾಗಿ ಜನಪ್ರಿಯರಾಗಿದ್ದ ಶ್ರೀಯುತ ಶಾಸ್ತ್ರಿಯವರ ಕುಟುಂಬದ ಸದಸ್ಯರಿಗೆ ದುಃಖ ಭರಿಸುವ ಶಕ್ತಿಯನ್ನು ದೇವರು ಕೊಡಲೆಂದು ಕಾರ್ಯಕಾರಿ ಸಮಿತಿ ಕೋರಿದೆ.

## ಬೃಹಚ್ಚರಣ ಸಂಘದ ಸದಸ್ಯರಿಗೆ ವಾರ್ಷಿಕ ಕ್ಯಾಲೆಂಡರ್

2012–13ನೇ ವಾರ್ಷಿಕ ಕ್ಯಾಲೆಂಡರ್ ಉಚಿತವಾಗಿ, ಸಂಘದ ಸದಸ್ಯರಿಗೆ ವಿತರಿಸಲಾಗುವುದು. ಸಂಘವು ಈ ಕೆಳಕಂಡ ಪ್ರಾಯೋಜಿಕರಿಗೆ ಆಭಾರಿ.

ಶ್ರೀಯುತ ವಿ.ಎಸ್. ಮಣಿ, ಮಂಜುನಾರಾಯಣ, ಶಿವರಾಂ, ಶ್ರೀ ವಿ. ಅರುಣ್ ವಿ. ಅಶೋಕ್, ಹೆಚ್.ಕೆ. ಶಶಿಧರ್, ಎ.ವಿ. ಮಂಜುನಾಥ್ ಎಸ್. ಉಮೇಶ್, ಎಂ.ಆರ್. ರವಿಶಂಕರ್, ಎ.ಆರ್. ಸುಂದರಮೂರ್ತಿ, ಗಣೇಶ್ ಕುಮಾರ್, ಶ್ರೀನಿವಾಸನ್, ಶ್ರೀಧರ್, ಎನ್.ಸಿ. ಶ್ರೀನಿವಾಸ, ಎಸ್.ಸಿ. ರಾಘವ ಪ್ರಸಾದ್, ಕೆ.ಎಸ್. ಸತ್ಯನಾರಾಯಣ.

## ನಮ್ಮನ್ನಗಲಿದ ನಮ್ಮವರು

**ಶ್ರೀಮತಿ ಗೌರಮ್ಮ ವಿಶ್ವನಾಥ್ ಎಸ್.ಆರ್.**
**ಶ್ರೀಮತಿ ಭಾಗ್ಯಲಕ್ಷ್ಮಿ ಗೋವಿಂದ**
**ಶ್ರೀಮತಿ ಪ್ರಮೀಳ (ಪೆಮ್ಮಿ) ನಾಗರಾಜ್ ಜಿ.ಕೆ.**
**ಶ್ರೀ ಎ.ಎಲ್. ಸುಬ್ರಮಣ್ಯಂ**
**ಶ್ರೀ ಟಿ.ಜಿ. ನಾಗರಾಜ್**

*ಇವರಿಗೆ ನಮ್ಮ ಶ್ರದ್ಧಾಂಜಲಿ*



# ಸಾಂಸ್ಕೃತಿಕ ಸಂಜೆ ರಸಕ್ಷಣಗಳು - 31-12-2011



ರಾಷ್ಟ್ರಮಟ್ಟದ ಪ್ರಶಸ್ತಿ ವಿಜೇತರಾದ ಶ್ರೀ ಗುರುಪ್ರಸನ್ನ ಅವರಿಗೆ ಸನ್ಮಾನ
ಬೆಟ್ಟಕೋಟೆ ರಾಮಸ್ವಾಮಿ ಅವರಿಂದ




ಮೋಜಿನ ಆಟ



ಹಿರಿಯ ಸದಸ್ಯೆ
ಶ್ರೀಮತಿ ಗೌರಮ್ಮ ಅವರಿಂದ ಗಾಯನ



ಕು॥ ಸಾಯಿ ಸಿಂಧೂರಳಿಂದ ಭರತನಾಟ್ಯ



ಹಿರಿಯ ಸದಸ್ಯ ಶ್ರೀ ನಾಗರಾಜ್ ಅವರಿಂದ ಗಾಯನ



ಶ್ರೀ ಪ್ರಜ್ವಲ್ ಸತ್ಯನಾರಾಯಣ ಅವರಿಂದ ವೇಣುವಾದನ
ಪಕ್ಕವಾದ್ಯದಲ್ಲಿ ಶ್ರೀ ಗುರುಪ್ರಸನ್ನ



ರಾಷ್ಟ್ರಗೀತೆ

# ಗುಂಜೂರ್ ಶ್ರೀ ವೆಂಕಟರಮಣಯ್ಯ, ಅಮ್ಮಣ್ಣಮ್ಮ ವಿದ್ಯಾರ್ಥಿ ನಿಲಯದ ನೆನಪುಗಳು

ದಾನವು "ವ್ಯಕ್ತಿ ಮತ್ತು ಸಮಾಜ'ಗಳೆರಡರ ಉನ್ನತಿಗೆ ಪಾರದರ್ಶಕತೆಯಾಗಿ ಚಾರಿತ್ರ್ಯದಲ್ಲೂ ಮತ್ತು ಇತಿಹಾಸದಲ್ಲೂ ಮಹತ್ವದ್ದಾಗಿ ಬಿಂಬಿಸುತ್ತದೆ. ಅಂದು 1966ನೇ ಇಸವಿ ಸರ್ಕಾರಿ ಕಾಲೇಜಿನಲ್ಲಿ ವಿಜ್ಞಾನ ಪದವಿಯನ್ನು ವ್ಯಾಸಂಗ ಮಾಡುತ್ತಿದ್ದಾಗ ನನ್ನ ಮಾತೃಶ್ರೀಯವರಾದ ಶ್ರೀಮತಿ ಶಾರದಮ್ಮನವರು ಕಾಲೇಜಿನ ಅಂಕಣಕ್ಕೆ ಭೇಟಿಯಿತ್ತರು. ಅಂದು ನನಗೆ ಆಕಸ್ಮಿಕವಾಗಿ ನನ್ನ ತಾಯಿಯವರಿಗೆ ಪರಿಚಯವಾದಂತ ಶ್ರೀಯುತ ನಾಗವಾರ ಪಾಳ್ಯದ ಶ್ರೀಕಂಠಯ್ಯನವರು ಮತ್ತು ಬ್ರಿಟಿಷರ ಕಾಲದ ಗೌರವಾನ್ವಿತ ದಂಡನಾಧಿಕಾರಿ ಯವರಾದಂತ ಶ್ರೀನಿವಾಸ್ ಭೇಟಿಯಾಗಿ ಪ್ಲೀಡರ್ ಆಗಿದ್ದ ಅಂದಿನ ಶ್ರೀಯುತ ವೆಂಕಟರಮಣಯ್ಯನವರ ವಿದ್ಯಾರ್ಥಿ ನಿಲಯಕ್ಕೆ ಸೇರ್ಪಡಿಸಿದರು. ಸದರಿ ವಿದ್ಯಾರ್ಥಿನಿಲಯ ನಂ. 13, ಎಂ.ಬಿ.ಟಿ. ರಸ್ತೆ, ನಗರ್‌ತರ್ ಪೇಟೆಯಲ್ಲಿದ್ದು ವಾಸ್ತುಶಿಲ್ಪಯಂತಹ ಕಟ್ಟಡವು ನನ್ನ ಕಾಲೇಜಿಗೆ ಸಮೀಪವಾಗಿತ್ತು. ಒಂದೆರಡು ಸಲ ವಿದ್ಯಾರ್ಥಿನಿಲಯದ ಟ್ರಸ್ಟಿಗಳ ಮನೆಗೆ ಮೀಟಿಂಗ್ ಪುಸ್ತಕವನ್ನು ತೆಗೆದುಕೊಂಡು ಹೋಗಲು ಅಂದಿನ ಮ್ಯಾನೇಜಿಂಗ್ ಟ್ರಸ್ಟಿಗಳಾದ ಗುಂಜೂರು ಶ್ರೀನಿವಾಸಮೂರ್ತಿಗಳು ಆಜ್ಞಾಪಿಸಿದ್ದರು. ನಾನು ವಿನಯ ಪೂರ್ವಕವಾಗಿ ಅಂದೇ ಅಂದಿನ ಟ್ರಸ್ಟಿಗಳಾದ ಶ್ರೀಯುತ ಡಾ. ದಾನಪ್ಪ, ಶ್ರೀಯುತ ಶ್ರೀಕಂಠಯ್ಯನವರು, ಹೊಸಕೋಟೆ ವೆಂಕಟಸುಬ್ಬಯ್ಯನವರು, ಸಣ್ಣೆ ಶ್ರೀನಿವಾಸಯ್ಯನವರು ಮತ್ತು ಗೌರವಾನ್ವಿತ ಮ್ಯಾಜಿಸ್ಟ್ರೇಟ್ ಶ್ರೀನಿವಾಸ್‌ರವರನ್ನು ಕಂಡ ನೆನಪುಗಳು ಇವೆ. ಇಂದಿಗೂ ಅಂತಹ ಗಣ್ಯರ ದಕ್ಷತೆ, ಶಿಸ್ತು, ವಾತ್ಸಲ್ಯ ಮತ್ತು ಚೈತನ್ಯಗಳನ್ನು ಮರೆಯಲಾಗದು. ಬದುಕು ಪಾರದರ್ಶಕವಾಗಿರ ಬೇಕಾದಲ್ಲಿ ಈ ಗಣ್ಯರ ನಡೆನುಡಿ ಪ್ರಶಂಸನೀಯ. ನಾನು ಈ ಪವಿತ್ರಸ್ಥಳದಲ್ಲಿ ಪರಿಪೂರ್ಣವಾಗಿ ವ್ಯಾಸಂಗ ಮಾಡಿ ಕೆ.ಎ.ಎಸ್.ನಲ್ಲಿ ಉತ್ತೀರ್ಣನಾಗಿ ಸಹಾಯಕ ಕಮೀಷನರ್ ಹುದ್ದೆಯಿಂದ ನಿವೃತ್ತಿಯಾಗಿ ಅಂದು ಸಾಹಿತ್ಯದಲ್ಲಿ ಸ್ವಲ್ಪ ಕೃಷಿಮಾಡಿ ಗಣಿತ ಪಾಠವನ್ನು ಬೋಧಿಸಿರುವ ನೆನಪುಗಳು ಇಂದಿಗೂ ಮರೆಯಲಾಗದು ಮತ್ತು ಆ ನೆನಪಿನ ಸಾನ್ನಿಧ್ಯವು "ಬೃಹಚ್ಚರಣ" ಪೀಠಕ್ಕೆ ಸೇರತಕ್ಕದ್ದು.

■ ಸೇಲಂ ವಿ. ಸುಬ್ರಹ್ಮಣ್ಯಂ



ಗುಂಜೂರು ಮಣಿಯವರಿಂದ ಲಯ ವಾದ್ಯ ಕಛೇರಿ

"ಈ ಸಂಸಾರ ಸಾಗರದಲ್ಲಿ ನಮ್ಮ ಜೀವನ ಪಯಣ ಯಾವಾಗಲೂ ಎರಡು Shipಗಳ ನಡುವೆಯೇ ಸಾಗುತ್ತಿರುತ್ತೆ. ಒಂದು ಕಡೆ Relation Ship ಮತ್ತೊಂದು ಕಡೆ Friend Ship. ಈ ಎರಡು Ship ಗಳ ನಡುವಿನ ಪಯಣ ಸಾಗಿ ದಡ ತಲುಪಿ ಗುರಿ ಮುಟ್ಟಬೇಕಾದರೆ Relation Ship ಮತ್ತು Friend Ship ಗಳಲ್ಲದೆ ಇನ್ನೂ ಒಂದು Ship ನ ಆಸರೆ ಎಲ್ಲರಿಗೂ ಬೇಕೇ ಬೇಕು. ಆ ಮೂರನೇ Ship ಏ Worship ಅಂದರೆ "ಭಕ್ತಿ". ಭಕ್ತಿ ಮತ್ತು ಹಾಸ್ಯ ಮನೋಭಾವ ಸುಖ ಜೀವನಕ್ಕೆ ಅತ್ಯವಶ್ಯಕ.

■ ಹೆಚ್.ಸಿ. ರಾಮಕೃಷ್ಣ (ಕಿಟ್ಟಿ)

# ಓದುಗರ ಪತ್ರಗಳು



ಮಾನ್ಯರೆ,

ತಮ್ಮ ಸಂಪಾದಕತ್ವದಲ್ಲಿ ಹೊರಬಂದಿರುವ ನಮ್ಮ ಜನಮಂಡಳಿಯ ತ್ರೈಮಾಸಿಕ "ಬೃಹಚ್ಚರಣ" ಪತ್ರಿಕೆಯ ಎರಡೂ ಸಂಚಿಕೆ ನೋಡಿದೆ ಓದಿದೆ ಮತ್ತು ಮೆಚ್ಚಿದೆ. ನಮ್ಮ ಜನಮಂಡಳಿಯ ಬೆಂಬಲ ದೊಡ್ಡ ಸಾಧನೆಯೇ ಸರಿ. ಪತ್ರಿಕೆಯ ವಿನ್ಯಾಸವೂ ಬಹಳ ಸುಂದರವಾಗಿದೆ. ಇನ್ನೂ ಪತ್ರಿಕೆ ಶೈಶವಾವಸ್ಥೆಯಲ್ಲಿರುವುದರಿಂದ ಮುಂದಿನ ಸಂಚಿಕೆಯಲ್ಲಿ ಹೊಸ ಹೊಸ ಅಂಕಣಗಳನ್ನು ಸೇರಿಸಿದರೆ (ಅದರಲ್ಲೂ ಹಾಸ್ಯ) ಪತ್ರಿಕೆ ಇನ್ನೂ ಶೋಭಿಸಬಹುದು. ನಮ್ಮ ಭಾಷೆಯ 'ಪದಬಂಧ'ದಿಂದ ನಮ್ಮ ಭಾಷೆಯ ಪದಗಳ ಪರಿಚಯವಾಗಲು ಸಹಾಯಕವಾಗಿದೆ. ಪತ್ರಿಕೆಗೆ ಶುಭಾಶಯಗಳು. ತಮ್ಮ ತಂಡದ ಪ್ರಯತ್ನಕ್ಕೆ ಹಾರ್ದಿಕ ಅಭಿನಂದನೆಗಳು.

**ಹೆಚ್.ಸಿ. ರಾಮಕೃಷ್ಣ (ಕಿಟ್ಟಿ)**

★ ★

28–8–2011 ಪೆರಿಚರಣ ಸಂಘು ಪಣ್ಣಿನ ಕಾರ್ಯತಕು ನಮ್ದೆ ಜನು ಶಾನೆ ಪೇರು ವಂದಿರ್‌ಂದ. ಅದು ಪಾರ್ಕಕ್ಕು ಕಣ್ಕು ಹಬ್ಬು. ಕಳವಾಕುಳ್ಕು ಸನ್ಮಾನು ಪಣ್ಣಿರ್‌ಂದು ನಲ್ಲಕಾರ್ರ್ಯ. ಅವಾಳ್ದೆ ಆಶೀರ್ವಾದು ವಾಂಕುಳುದ್ದು ನಲ್ಲ್ ಸಂಪ್ರದಾಯು. ಇಪ್ಪಡಿಯೆ ಎಲ್ಲಾ ನೆರಂಜಿ ನಮ್ದೆ ಸಂಘು ಇನ್ನೂ ಮುನ್ನಕ್ಕು ವರೋಣು ಅಂಗದ್ದೆ ಎಂಗಳ್ದೆಲ್ಲಾ ದುರ್ಗ ಸ್ವಾಮೀದೇಲೆ ಪ್ರಾರ್ಥನೆ. ಇಂದ್ ಸಂಘ ಮುನ್ನೆವರೋಣು ಅನ್ನುದ್ದೆ ಎಂಗಳ್ದೆ ಆಶೆ. ಆಶೀರ್ವಾದುಂಗು.

ಇತಿ ಉಂಗಳ್ದೆ ಸದಸ್ಯೆ

**ಆರ್.ವಿ. ಗೋಪೀನಾಥ್**

★ ★

ಮಾನ್ಯರೇ,

ಮಂಜಪುತ್ತೂರ್ ಬೃಹಚ್ಚರಣ ಜನರು ಸ್ವಭಾವತಃ ಸಾತ್ವಿಕರು, ಹಾಸ್ಯಪ್ರಿಯರು, ಸರಸಿಗಳು. ಎಲ್ಲೇ ಇರಲಿ ಸ್ನೇಹಸಂಪಾದನೆ ಮುಖ್ಯಗುಣ. ಇತರರ ಜೊತೆ ಹೊಂದಾಣಿಕೆ. ಅನುಸರಿಸುವ ಕಲೆ ಜೊತೆಗೆ (ಅಣಕವಾಡು) ಧ್ವನಿ, ದೇಹಭಾಷೆ ಅವರಂತೆಯೇ ಆಡಿ ತೋರಿಸುವ ಕಲೆಗಾರಿಕೆ ಇದೆ. ಧರ್ಮಬೀರು, ದೈವಭಕ್ತಿ, ಯಥಾನುಶಕ್ತಿ ದಾನಬುದ್ಧಿ, ಪರೋಪಕಾರ ಗುಣಗಳು ರಕ್ತಗತವಾಗಿದೆ. ಕೆಲವರು ವಿದ್ಯಾವಂತರು. ಹೆಚ್ಚು ಜನ ಬುದ್ಧಿವಂತರು, ಹೃದಯವಂತರು. ಧಾರ್ಮಿಕ ವಿಷಯದಲ್ಲಿ ಹೆಚ್ಚು ಶ್ರದ್ಧೆ. 600 ವರ್ಷದ ಇತಿಹಾಸ ಇರುತ್ತದೆ. ಕಿತ್ತಿಗಾನಹಳ್ಳಿಯಲ್ಲಿ ನಾಗಾರಾಧನೆ. ಅನ್ನದಾನಾದಿಗಳು ಇಂದಿಗೂ ನಡೆಯುತ್ತಿದೆ. ನಮ್ಮ ಜನಾಂಗದ ಯುವಪೀಳಿಗೆ ಸಂಘ ಸ್ಥಾಪಿಸಿ ಹಿರಿಯರಿಗೆ ಸನ್ಮಾನ, ಕಿರಿಯರಿಗೆ ವಿದ್ಯಾಪ್ರೋತ್ಸಾಹ ಒಳ್ಳೆಯ ಕಾರ್ಯಗಳಿಗೆ ಹುರಿದುಂಬಿಸಿ, ಕಲೆಯ ಬೆಲೆ ಅರಿತು ಪ್ರೋತ್ಸಾಹ ನೀಡುತ್ತಿದ್ದಾರೆ. ಇನ್ನು ಮುಂದೆಯೂ ಈ ಕಾರ್ಯಕ್ರಮ ಹೆಚ್ಚು ಅಚ್ಚುಕಟ್ಟಾಗಿ ನಡೆದು ಎಲ್ಲರ ಪ್ರೋತ್ಸಾಹ ದೊರೆಯಲಿ, ಹೆಚ್ಚು ಶ್ರೇಯಸ್ಸಾಗಲಿ ಎಂದು ಹಾರೈಕೆ.

**ಭ್ರಮರ ಗೋಪೀನಾಥ**

Book-Post

To, ______________________

______________________

______________________

ಜಾಹೀರಾತು ನೀಡಿ ಸಹಕರಿಸಬೇಕಾಗಿ ಪ್ರಾರ್ಥನೆ

Published by Sri S. Soma Sundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at Ila Mudrana, No. 36, 40Ft. Road, Raghavanagar, NTY Layout, Bengaluru-560 026.